Shri Mahaganapathi Sangeeta Pratishthana ® Kotemane

**MANAWINEE VIDYANILAYA**

**Approved by Govt. of Karnataka**

Post : Ummachagi, Tq : Yellapur

Cell : 9448423234, E-mail : manaswineeedu@gmail.com

R.No. 18/2016-17
3288/925/2018-19
29340714004

**ದಿನಾಂಕ :**

**ಇವರಿಗೆ,**

______________________________

______________________________

______________________________

## ಮನಸ್ವಿನೀಯಿಂದ ಒಂದು ವಿನಮ್ರ ಮನವಿ

**"ಅನೋಭದ್ರಾಃ ಕೃತವೋಯಂತು ವಿಶ್ವತಃ"**. ಜಗತ್ತಿನ ಒಳ್ಳೆಯ ವಿಚಾರಗಳೆಲ್ಲವೂ ನನ್ನೆಡೆಗೆ ಬರಲಿ ಎಂಬುದು ಪ್ರಸಿದ್ಧವಾದ ಉಕ್ತಿ. ನಮ್ಮೆಡೆಗೆ ಬರುವ ವಿಚಾರಗಳನ್ನು ಸಮರ್ಥವಾಗಿ ನಮ್ಮೊಳಗೆ ಹುದುಗಿಸಿಕೊಳ್ಳಬೇಕಾದರೆ ಸಂಸ್ಕಾರವಂತ ಉತ್ತಮ ಶಿಕ್ಷಣ ಬೇಕು.

ಈಗಾಗಲೇ ನಮ್ಮೊಳಗೆ ಅಡಗಿರುವ ಜ್ಞಾನ ವೃಕ್ಷದ ಶಾಖೆಗಳೆಲ್ಲವೂ ಸಹಜ ಸಮೃದ್ಧವಾಗಿ ಹೊರಸೂಸಲು ಸಮರ್ಥ ಉಪಕರಣಗಳು ಬೇಕು. ಅವುಗಳೆಂದರೆ ಉತ್ತಮ ಪ್ರಾಕೃತಿಕ ಪರಿಸರ, ಒಳ್ಳೆಯ ಭಾಷಾ ಮಾಧ್ಯಮ, ಕಲಿಕೋಪಕರಣ ಹಾಗೂ ಈ ಉಪಕರಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಮಾಜಮುಖಿ ಶಿಕ್ಷಕಗಣ ಬೇಕು.

ಈ ಎಲ್ಲ ಶ್ರೇಷ್ಠ ಭಾವನೆಯ ವಿಚಾರದೊಂದಿಗೆ ಸಂಘಟಿಸಿರುವ ಸಂಸ್ಥೆ ನಮ್ಮ ಮನಸ್ವಿನೀಯಾಗಿದೆ. ನಮ್ಮ ಈ ಶಿಕ್ಷಣ ಸಂಸ್ಥೆಯಲ್ಲಿ ಇಂದಿನ ಕಾಲಕ್ಕೆ ಅವಶ್ಯವಾಗಿ ಬೇಕಾಗಿರುವ **ಇಂಗ್ಲೀಷ್** ಮಾಧ್ಯಮವಾಗಿದೆ. ಅದರೊಟ್ಟಿಗೆ **ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳನ್ನೂ ಕಲಿಸಲಾಗುತ್ತದೆ. ಚಿತ್ರಕಲೆ, ಶಾಸ್ತ್ರೀಯ ಸಂಗೀತ, ಯಕ್ಷಗಾನ ಭರತನಾಟ್ಯ ಮತ್ತು ಕ್ರೀಡಾ ತರಬೇತಿಯನ್ನೂ ನೀಡಲಾಗುತ್ತದೆ.**

ಸಮಾಜಮುಖಿಯಾಗಿ ಚಿಂತಿಸುವ ಪ್ರೀತಿ ವಿಶ್ವಾಸ ಸಹಜೀವನದಂತಹ ಮೌಲ್ಯಗಳನ್ನು ಮಗುವಿಗೆ ಶಿಕ್ಷಣದ ಪ್ರಾರಂಭಿಕಾವಸ್ಥೆಯಲ್ಲಿಯೇ ನೀಡಿ ಸೂಕ್ತ ನಾಗರಿಕರನ್ನಾಗಿ ರೂಪಿತಗೊಳಿಸಬೇಕೆಂಬ ನಮ್ಮ ಸಂಕಲ್ಪಕ್ಕೆ ತಮ್ಮ ತನು-ಮನ-ಧನ ಸಹಾಯ ಮಾಡಿ ಎಂಬುದು ನಮ್ಮ ಕಳಕಳಿಯಾಗಿದೆ.

ಆಧುನಿಕತೆ ಶಿಕ್ಷಣ ಕ್ಷೇತ್ರವನ್ನು ಬದಲಾಯಿಸಿದೆ. ಹೆಚ್ಚು ಹೆಚ್ಚು ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುತ್ತಿದೆ. ಮಕ್ಕಳಲ್ಲಿ ಕೌಶಲ್ಯವನ್ನು ಹೆಚ್ಚಿಸುವ ಕಳಕಳಿಯನ್ನು ಹೊಂದಿದೆ. ಶಾಲೆಯಲ್ಲಿ ಕಲಿಕಾಮಾಧ್ಯಮ ಇಂಗ್ಲೀಷ್ ಇರಬೇಕೆಂದು ಬಯಸುತ್ತಿದೆ.

ಮಕ್ಕಳ ಶಿಕ್ಷಣದ ವೃದ್ಧಿಗೆ ಹಿಂದಿ ಮತ್ತು ಪ್ರಾದೇಶಿಕ ಭಾಷೆಯ ಕಲಿಕೆ ಪೂರಕವಾಗಿ ಬೇಕು ಎಂಬುದನ್ನು ವಾದಿಸುತ್ತಿದೆ. ಇದರೊಟ್ಟಿಗೆ ಸಂಸ್ಕಾರವಂತ ಶಿಕ್ಷಣ ಪಡೆಯಲು **ಸಂಸ್ಕೃತ ಭಾಷೆ** ಅತ್ಯಗತ್ಯ ಎಂದು ಮನಗಂಡಿದೆ. ಹಾಗಾಗಿ ಈ ಎಲ್ಲ ಸಾಧ್ಯತೆಯನ್ನು ತನ್ನೊಳಗೆ ಹುದುಗಿಸಿಕೊಂಡು ಆಧುನಿಕತೆಯ ಈ ಶಿಕ್ಷಣವನ್ನು ಗ್ರಾಮೀಣ ಭಾಗದಲ್ಲಿ ದೊರಕಬೇಕು ಎಂಬ ಸದುದ್ದೇಶದ ಸಂಕಲ್ಪದೊಂದಿಗೆ ರೂಪಿತಗೊಂಡ ಶಿಕ್ಷಣ ಸಂಸ್ಥೆ ನಮ್ಮ **"ಮನಸ್ವಿನೀ ವಿದ್ಯಾನಿಲಯ"**ವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಹಸಿರು ಜಿಲ್ಲೆ ಎಂದೆ ಪ್ರಸಿದ್ಧವಾದುದು **ಉತ್ತರಕನ್ನಡ ಜಿಲ್ಲೆ**. ಒಂದು ಕಡೆ ಸಹ್ಯಾದ್ರಿ, ಒಂದು ಕಡೆ ಕಡಲು ನಡುಮಧ್ಯದಲ್ಲಿ ತೆಂಗು–ಅಡಿಕೆಗಳ ಮಡಿಲು ಸಿರಿಗನ್ನಡದ ಚಪ್ಪರವೇ ಈ ನನ್ನ ಜಿಲ್ಲೆ ಎಂದು ಹಾಡಿದವರು **ದಿ. ಡಾ. ದಿನಕರ ದೇಸಾಯಿ**ಯವರು.

ದೇಸಾಯಿಯವರು ಈ ಜಿಲ್ಲೆಯಲ್ಲಿ **ಕೆನರಾ ವೆಲ್‌ಫೇರ್ ಟ್ರಸ್ಟ್** ಎಂಬ ಸಂಸ್ಥೆಯನ್ನು ಸ್ಥಾಪಿಸಿ ಜಿಲ್ಲೆಯ ಮನೆ ಮನೆಯಲ್ಲಿ ಶಿಕ್ಷಣದ ದೀಪ ಬೆಳಗಿಸಿದ್ದಾರೆ. ಹಾಗೆಯೆ ಈ ಕಾನನದ ಜಿಲ್ಲೆಗೆ **ಗಣೇಶ ಹೆಗಡೆ ದೊಡ್ಡಮನೆ**ಯವರು ಕೂಡಾ ಶಿಕ್ಷಣ ಪ್ರಸಾರ ಸಮಿತಿಯನ್ನು ಸ್ಥಾಪಿಸಿ ಈ ಭಾಗದ ಶಿಕ್ಷಣ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಅಲ್ಲದೆ ಈ ಜಿಲ್ಲೆಯ ಅನೇಕ ಶಿಕ್ಷಣಾಭಿಮಾನಿಗಳು ಗ್ರಾಮಾಂತರ ಭಾಗದಲ್ಲಿ 60–70 ರ ದಶಕದಲ್ಲಿ ಕನ್ನಡ ಮಾಧ್ಯಮದ ಪ್ರೌಢ ಶಾಲೆಗಳನ್ನು ತೆರೆದು ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಉಪಕಾರ ಮಾಡಿದ್ದಾರೆ.

ಆದರೆ ಈಗ ಬದಲಾದ ಕಾಲಘಟ್ಟದಲ್ಲಿ ನಾವು ಈ ಶಿಕ್ಷಣ ವ್ಯವಸ್ಥೆಯಲ್ಲಿ ಹೊಸ ಆಲೋಚನೆ ಹಾಗೂ ಯೋಜನೆಗಳು ಬರುತ್ತಿವೆ. ಇವುಗಳಿಗೆ ತಕ್ಕಹಾಗೆ ನಮ್ಮ ಸಂಸ್ಥೆಯನ್ನು ಸಂಘಟಿಸಿ ಹೊಸ ತಲೆಮಾರಿನ ನವನವೋನ್ಮೇಷ ಪ್ರತಿಭೆಗಳನ್ನು ಬೆಳೆಸಲು ತೀರ್ಮಾನಿಸಿ ಹತ್ತನೆ ತರಗತಿಯವರಿಗೆ ಸುಸಜ್ಜಿತವಾದ ಶೈಕ್ಷಣಿಕ ಸೌಕರ್ಯವನ್ನು ಹೊಂದಿದ ಶಿಕ್ಷಣ ಸಂಸ್ಥೆ ನಮ್ಮ ಮನಸ್ವಿನೀ ವಿದ್ಯಾನಿಲಯವಾಗಬೇಕೆಂಬ ಇಚ್ಛಾಶಕ್ತಿಯೊಂದಿಗೆ **ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಉಮ್ಮಚಗಿ** ಎಂಬ ಗ್ರಾಮದಲ್ಲಿ ಸುಂದರ ಪ್ರಾಕೃತಿಕ ಪರಿಸರದಲ್ಲಿ ಸ್ಥಾಪಿತವಾಗಿದೆ.

ಗ್ರಾಮೀಣ ಭಾಗದ ಮಕ್ಕಳು ಆಂಗ್ಲ ಮಾಧ್ಯಮದ ಶಾಲೆಯಲ್ಲಿ ಕಲಿಯಬೇಕೆಂಬ ಉತ್ಸಾಹದಿಂದ ದೂರದ ಪೇಟೆ ಪಟ್ಟಣಗಳಿಗೆ ಬೆಳ್ಳಂಬೆಳಗ್ಗೆ ಬಸ್ಸಿಗೆ ಹೋಗುವುದನ್ನು ಕಂಡು ಪೇಟೆಯಲ್ಲಿ ದೊರೆಯುವ ಶಿಕ್ಷಣವನ್ನು ಸ್ಥಳೀಯವಾಗಿಯೇ ನೀಡೋಣ ಜೊತೆಗೆ ಪೇಟೆಯ ಮಕ್ಕಳು ಗ್ರಾಮೀಣ ಭಾಗಕ್ಕೆ ಬಂದು ಓದಬೇಕೆಂಬ ಸತ್ಸಂಕಲ್ಪದ ಚಿಂತನೆಯೊಂದಿಗೆ **ಶ್ರೀಮತಿ ರೇಖಾ ಭಟ್ಟ ಕೋಟೆಮನೆಯವರು** ಸಂಘಟಿಸಿದ ಸಂಸ್ಥೆ **ಮನಸ್ವಿನೀ ವಿದ್ಯಾನಿಲಯವಾಗಿದೆ.**

ನಮ್ಮ ಈ ಸಂಸ್ಥೆ ದಿನಾಂಕ : **28–04–2016 ರಲ್ಲಿ ಸ್ವರ್ಣವಲ್ಲಿ ಮಹಾಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳಿಂದ** ಉದ್ಘಾಟನೆಗೊಂಡಿತು. ಈ ಸಮಾರಂಭದಲ್ಲಿ **ವಿವೇಕಾನಂದ ಯೋಗ ವಿಶ್ವವಿದ್ಯಾಲಯ** ಬೆಂಗಳೂರು ಇದರ ಉಪಕುಲಪತಿಗಳಾದ **ಡಾ. ರಾಮಚಂದ್ರ ಭಟ್ಟ ಕೋಟೆಮನೆ**ಯವರು ದಿಕ್ಸೂಚಿ ಮಾತನಾಡಿ ನಮ್ಮನ್ನು ಹರಸಿ ಹಾರೈಸಿದರು. **ಕಾರ್ಮಿಕ ಸಚಿವರು ಹಾಗೂ ಶಿಕ್ಷಣಾಭಿಮಾನಿಗಳು** ಆದ ಇಂದಿನ ನಮ್ಮ **ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ**ರವರು ಈ ಸಮಾರಂಭದಲ್ಲಿ ಪಾಲ್ಗೊಂಡು ನಮ್ಮ ಈ ಪ್ರಯತ್ನವನ್ನು ಪ್ರಶಂಸಿಸಿದರು. ಹಾಗೆಯೇ ಗಣ್ಯರನೇಕರು ಶಾಲೆಯ ಉದ್ಘಾಟನೆಯ ಶುಭ ಸಂದರ್ಭದಲ್ಲಿ ಉಪಸ್ಥಿತರಿದ್ದು ಶುಭಾಶಯ ಕೋರಿದರು.

ಈ ಮಕ್ಕಳ ಶೈಕ್ಷಣಿಕ ಸಾಧನೆಗೆ ನಮ್ಮದೆ ಆದ **ಕಟ್ಟಡ,** ಆಟೋಟಕ್ಕೆ ಬೇಕಾದ **ಮೈದಾನ, ವಿಜ್ಞಾನ** ಬೋಧನೆಗೆ ಬೇಕಾದ ಸುಸಜ್ಜಿತವಾದ **ಪ್ರಯೋಗಾಲಯ, ಗ್ರಂಥಾಲಯ, ಯೋಗ ಧ್ಯಾನ, ಸಂಗೀತ** ಕಲಿಕೆಯ **ಕುಟಿರ, ಶಿಕ್ಷಕರ ಕೊಠಡಿ, ಆಡಳಿತ ಕಛೇರಿ ಪಾಠೋಪಕರಣ** ಹಾಗೂ **ಪೀಠೋಪಕರಣ** ಮುಂತಾದವುಗಳನ್ನು ಸಂಘಟಿಸಿ ಈ ತಲೆಮಾರಿನ ಶಿಕ್ಷಣದ ಆವಶ್ಯಕತೆಯನ್ನು ಪೂರೈಸಲು **"ಗುರುಕುಲ"** ಮಾದರಿಯನ್ನು ಅಳವಡಿಸಲು ಮನಸ್ವಿನೀ ಮುಂದಾಗಿದೆ.

ಈಗಾಗಲೇ ಎರಡು ಎಕರೆ ಜಾಗವನ್ನು ಖರೀದಿಸಿದ್ದೇವೆ. ಈ ಸ್ಥಳದಲ್ಲಿ ನಮ್ಮ ಬಯಕೆಯ ಶಿಕ್ಷಣ ನಿಲಯವನ್ನು ಕಟ್ಟಲು ನೀಲನಕ್ಷೆಯನ್ನು ತಯಾರಿಸಿದ್ದೇವೆ. ಈ ಶಿಕ್ಷಣಾಲಯಕ್ಕೆ ಸುಮಾರು ಅಂದಾಜು ವೆಚ್ಚ 2 ಕೋಟಿ ತಗುಲಬಹುದಾಗಿದೆ. ಹಾಗಾಗಿ ಸಹೃದಯ ಶಿಕ್ಷಣಾಭಿಮಾನಿಗಳಾದ ತಾವು ಉದಾರವಾದ ಭಾವನೆಗಳೊಂದಿಗೆ ಧನ ಸಹಾಯವನ್ನು ನೀಡಬೇಕಾಗಿ ನಮ್ಮ ಮನಸ್ವಿನೀ ಬಳಗ ಸವಿನಯವಾಗಿ ವಿನಂತಿಸಿಕೊಳ್ಳುತ್ತದೆ.

ಇದರೊಂದಿಗೆ ಬ್ರೋಶರ್‌ನಲ್ಲಿ ಶಾಲೆಯ ಚಿತ್ರಣವನ್ನು ನೀಡಲಾಗಿದೆ ಆದರೆ ಇದು 10 ವರ್ಷದ ಯೋಜನೆಯಾಗಿರುತ್ತದೆ. ಇದನ್ನು ಹಂತ ಹಂತವಾಗಿ ಸಾಕಾರಗೊಳಿಸುವ ಉದ್ದೇಶ ನಮ್ಮದು. ಕೇವಲ ಆಂಗ್ಲ ಮಾಧ್ಯಮಕ್ಕೇ ಹೆಚ್ಚು ಒತ್ತು ನೀಡದೆ **"ಗುರುಕುಲ"** ಪದ್ಧತಿಯ ಶಿಕ್ಷಣ ಹಾಗೂ ಆಧುನಿಕ ಶಿಕ್ಷಣವನ್ನೂ ಅಳವಡಿಸಲಾಗಿದೆ. ಈಗ **LKG** ಯಿಂದ **5** ನೇ ತರಗತಿವರೆಗಿನ ವಿದ್ಯಾಭ್ಯಾಸಕ್ಕೆ ಅತ್ಯಗತ್ಯವಾಗಿರುವ ಅವಶ್ಯಕತೆಗಳು ಈ ಕೆಳಗಿನಂತಿವೆ....

* **ಕೊಠಡಿ–7**
* **ಪೀಠೋಪಕರಣಗಳು**
* **ಶೌಚಾಲಯ–4**
* **ವಸತಿ ವ್ಯವಸ್ಥೆ (25 ವಿದ್ಯಾರ್ಥಿಗಳಿಗೆ)**
* **ಅಡುಗೆ ಕೋಣೆ**
* **ಯೋಗ, ಧ್ಯಾನ, ಸಂಗೀತ ಕುಟೀರ**
* **ಗ್ರಂಥಾಲಯ**
* **ಶಿಕ್ಷಕರ ಕೊಠಡಿ**
* **ಆಫೀಸ್ ರೂಮ್**

## ಬ್ಯಾಂಕ್ ವಿವರ :

**ಶ್ರೀ ಮಹಾಗಣಪತಿ ಸಂಗೀತ ಪ್ರತಿಷ್ಠಾನ (ರಿ) ಕೋಟೆಮನೆ**

**ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಉಮ್ಮಚಗಿ**

**ಬ್ಯಾಂಕ್ ಖಾತೆ ನಂಬರ್ : 17093033646**

**IFSC Code : KVGB0009551**

ಬನ್ನಿ ಸಹೃದಯರೇ ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣದ ಅಭ್ಯುದಯಕ್ಕೆ ಹರಸಿ ಹಾರೈಸಿ......

ಇಂತಿ ನಿಮ್ಮ

ಶ್ರೀಮತಿ ರೇಖಾ ಭಟ್ಟ ಕೋಟೆಮನೆ

ಹಾಗೂ ಮನಸ್ವಿನೀ ಬಳಗ

# Humble Request

**"Anobhadraha Kritavayantu Viswataha"** This is an epical statement which conveys the meaning that " Let all the good things in the world come to me. "This could be achieved through the process of effective learing.

Learning is a continuous process which is not bound to any limits. Natural environment, learning aids, language, experienced and passionated teachers are instrumental to nurture the branches of a big tree called "Knowledge" hidden within us. The education system which comprises of global standerd, regional and cultural values, adopting of technology and skill development programs in right proportion aids in a refined and quality approach of educating students.

**"Manaswinee Vidyanilaya"** is a educational institution which is built to provide quality education to students based on the above mentioned principles. Our primary objective is to provide effective education to students which would enable them to learn, create, adopting and implementing good and new ideas. **Mrs. Rekha Bhat Kotemane** established this institution with an ambition to provide standard and quality education in rural areas.

In our institution english is the primary medium which is essential for current generation to be in line with global standards. Along with this **Kannada, Hindi** and **Sanskrit** languages are also part of curriculum. **Classicsl Music, Bharatanatyam, Yakshagaana, Painting, Sports Training** are offered to encourage skill development in non-curriculum areas. Overall we could confidently claim that we formed **"Cultured Modern Gurukula System"**.

**Uttarakannada** is popularly known as **"Green District"** in karnataka. It is surrounded by hills, dense forest and seashores. **Dr. Dinakara Desai** a poet and educationlist of this district. Etablished a trust called **"Canara Wellfare"** to promote better educational standards in rural areas. **Mr. Ganesh Hegde Doddamane** also contributed extensively to this field by forming a "Shikshana Prasaraka Samiti". Also several others helped thousands of students during 60-70 decades.

In this blessed district our **"Manaswinee Vidyanilaya"** is stituated in Ummachagi a village in Yellapur Taluk. Institution was inaugurated by **Sri Srimad Gangadharendra Saraswati swamiji** in **28-04-2016. Dr. Ramachandra Bhat Kotemane VC of Vivekananda Yoga University** participated in this event and blessed us with his encouragingwords. **Shri Shivaram Hebbar (Hon. Minister) Minister** incharge os our district and other dignotarice also participated and conveyed their best wishes..

The institution has purchased the required area of land about 2 acres with the plan of building better school infrastructure and amenities like **building, library,** well epuipped **laboratory** and **play ground.** Therefore our humble request is to support and help us generously in the form of funds and guidence.

**The essential repuirements LKG to 5th Standard as follows :-**

1. Class Room - 7
2. Staff Room
3. Office Room
4. Library
5. Room for Yoga, Meditation and Music
6. Hostel (for 25 students)

# Bank Details

**Shri Mahaganapati Sangeeta Pratishthana ® Kotemane**

**Karnataka Vikasa Gramina Bank Ummachagi**

**Bank Account Number : 17093033646**

**IFSC Code : KVGB0009551**

**Comeon dears, Join together for the educational advancement of rural children.**

## Rekha Bhat Kotemane and Team.